ಸಿ.ಸಿ.1604/2015 **ಪಿಡಬ್ಲ್ಯೂ- 1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕಃ 06.02.2024**

**ಪಾಟೀ ಸವಾಲು ಃ ಶ್ರೀ ಯು ಎಮ್ ಆರೋಪಿ ಪರ ವಕೀಲರಿಂದ ಃ**

1. ನಾನು 10 ನೇ ತರಗತಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಇಂಗ್ಲೀಶ್ ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ನಮ್ಮ ವಕೀಲರು ತಯಾರಿಸಿರುತ್ತಾರೆ ಅದಕ್ಕೆ ನಾನೇ ಮಾಹಿತಿ ನೀಡಿರುತ್ತೇನೆ. ಆರೋಪಿಯು ನನ್ನ ಕಡೆಯಿಂದ ಹಣ ತೆಗೆದುಕೊಂಡಿದ್ದರು ಆ ಸಂಬಂದ ಈ ಪ್ರಕರಣವನ್ನು ದಾಖಲಿಸಿರುತ್ತೇನೆ. ಆ ರೀತಿ ಆರೋಪಿಯು ತನ್ನ ಮಕ್ಕಳ ಅನಾರೋಗ್ಯದ ಬಗ್ಗೆ ಮತ್ತು ಮನೆಯ ಕರ್ಚಿಗಾಗಿ 2 ಲಕ್ಷ 90 ಸಾವಿರ ಪಡೆದುಕೊಂಡಿರುತ್ತಾರೆ. ಆ ರೀತಿ ಸದರಿ ಹಣವನ್ನು ಆರೋಪಿಗೆ ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ಆರೋಪಿಯು ನನಗೆ ಪರಿಚಯ ಇದ್ದು ಅವರ ಮಕ್ಕಳ ವಿದ್ಯಾಬ್ಯಾಸಕ್ಕೆ ಮತ್ತು ಅನಾರೋಗ್ಯಕ್ಕೆ ಹಣ ಕೊಟ್ಟಿದ್ದೇನೆ ಎಂದು ದೂರಿನಲ್ಲಿ ಹೇಳಿದ್ದೇನೆ ಎಂದರೆ ಸರಿ. ಆರೋಪಿಗೆ 2014 ರಲ್ಲಿ ನಮ್ಮ ಮನೆಯಲ್ಲಿ ಹಣವನ್ನು ಕೊಟ್ಟಿರುತ್ತೇನೆ. ಆ ಸಮಯದಲ್ಲಿ ನಾನು ಮತ್ತು ನನ್ನ ಮಗ ಇದ್ದೆವು. ನಮ್ಮನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಆ ಸಮಯದಲ್ಲಿ ನನ್ನ ಮಗ 10 ನೇ ತರಗತಿ ಓದುತ್ತಿದ್ದರು. ನನ್ನ ಮಗನಿಗೆ ಸಂಪೂರ್ಣ ಮಾಹಿತಿ ಇದೆ ಎಂದರೆ ಸಾಕ್ಷಿ ಚಿಕ್ಕವನಾಗಿದ್ದ ಕಾರಣ ಇರುವುದಿಲ್ಲ ಎಂದು ನುಡಿಯುತ್ತಾರೆ.

2. ಆರೋಪಿಯು 3 ತಿಂಗಳ ಒಳಗಾಗಿ ಹಣ ಹಿಂದುರಿಗಿಸುವ ಬಗ್ಗೆ ದೂರಿನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ನಂತರ ನಾನು ಆರೋಪಿಯನ್ನು ಕೇಳಿದಾಗ ಕನಿಪಿ-1 ನ್ನು ನೀಡಿದ್ದು, ನಂತರ ನಿಪಿ-1 ನ್ನು ಬ್ಯಾಂಕ್ ಗೆ ಹಾಕಿದಾಗ ಹಣ ಇಲ್ಲ ಎಂದು ಗೊತ್ತಾಗಿರುತ್ತದೆ. ಆರೋಪಿಯು ಕೆನರಾ ಬ್ಯಾಂಕ್ ನ ಚೆಕ್ ನ್ನು ನೀಡಿರುತ್ತಾರೆ. ನಿಪಿ-1 ರಲ್ಲಿರುವ ದಿನಾಂಕ ನನಗೆ ಹೇಳಲು ಆಗುವುದಿಲ್ಲ. ನಿಪಿ-3 ವಾಪಸ್ಸು ಬಂದ ನಂತರ ಆರೋಪಿಯನ್ನು ನಾನು ಕೇಳಿದ್ದು ಆತನು ಈಗ ನನಗೆ ತೊಂದರೆ ಇದೆ ನಂತರ

ಕೊಡುತ್ತೇನೆ ಎಂದು ಹೇಳಿದರು. ಈ ಬಗ್ಗೆ ನನ್ನ ದೂರಿನಲ್ಲಿ ತಿಳಿಸಿರುವುದಿಲ್ಲ. ಆರೋಪಿಗೆ ನಾನು ಹಣ ನೀಡಿದ್ದು ಅದನ್ನು ಆತನು ಮರು ಪಾವತಿ ಮಾಡಿದ್ದು ಹೆಚ್ಚಿನ ಬಡ್ಡಿಗಾಗಿ ನಿಪಿ-1 ನ್ನು ಬ್ಯಾಂಕ್ ಗೆ ಹಾಜರು ಪಡಿಸಿ ಈ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ.

3. ದಿ:08.07.2014 ರ ನೋಟಿಸ್ ನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಅದು ನಮ್ಮ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ಆ ರೀತಿ ನೋಟಿಸ್ ನೀಡಿದ್ದ ಬಗ್ಗೆ ಅಂಚೆ ಕಚೇರಿಯ ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಅದು ನಮ್ಮ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ನಿಪಿ-5 ದಿ:29.10.2014 ರಂದು ನೀಡಿದ್ದು ದೂರಿನಲ್ಲಿ ದಿ:30.10.2014 ರಂದು ನೀಡಿದ್ದೇವೆ ಎಂದು ತಿಳಿಸಿದ್ದೇವೆ ಎಂದರೆ ಸಾಕ್ಷಿ ಅದು ನಮ್ಮ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ಅದರ ರಿಸೀಟ್ ನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಆರೋಪಿ ನನಗೆ ಯಾವುದೇ ಹಣ ಕೊಡಬೇಕಾಗಿಲ್ಲ ಎಂದರೆ ಸರಿಯಲ್ಲ. ಆತನ ಮನೆಯಿಂದ ಚೆಕ್ ನ್ನು ಪಡೆದುಕೊಂಡು ನಾನೇ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ದಿ:08.07.2014 ಮತ್ತು 30.10.2014 ರಂದು ನೋಟಿಸ್ ನೀಡಿ ಆ ಆಧಾರದ ಮೇಲೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

**(ಮರು ವಿಚಾರಣೆ: ಇಲ್ಲ)**

**(ಉಕ್ತಲೇಖನವನ್ನು ತೆರೆದ ನ್ಯಾಯಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ದೇವನಹಳ್ಳಿ**